**ಸಾಕ್ಷಿಗೆ ದಿನಾಂಕ 05.04.2025 ರಂದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನಾನು 7 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದು ಬರಹ ಸ್ವಲ್ಪ ಬರುತ್ತದೆ. ನಾನು ಖಾಸ್ ಬಾಗ್ ಟೌನ್‌ನಲ್ಲಿ ವಾಸವಿರುತ್ತೇನೆ. ನಾನು ಲೇವಾದೇವಿ ವ್ಯವಹಾರವನ್ನು ಮಾಡಿರುವುದಿಲ್ಲ. ನಾನು ಆರೋಪಿಯ ಮೇಲೆ ಪ್ರಕರಣವನ್ನು ನನಗೆ ಮೋಸ ಮಾಡಿರುವ ಕಾರಣ ಹೂಡಿರುತ್ತೇನೆ. ನಾನು ಆರೋಪಿಗೆ ಹಣವನ್ನು ನೀಡಿರುತ್ತೇನೆ. ಆರೋಪಿಯು ನನಗೆ ಎಸ್.ಬಿ.ಐ. ಬ್ಯಾಂಕಿನ ಚೆಕ್ಕನ್ನು ನೀಡಿದ್ದು, ಚೆಕ್ಕು ನೀಡಿದ ಕಾರಣ ನಾನು ನೀಡಿದ ಹಣವನ್ನು ಹಿಂದಿರುಗಿಸುವ ಕಾರಣ ನೀಡಿರುತ್ತಾರೆ. ಅದನ್ನು ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ. ಸದರಿ ವಿಚಾರವನ್ನು ನನ್ನ ದೂರಿನಲ್ಲಿ ತಿಳಿಸಿರುತ್ತೇನೆ. ಆರೋಪಿಯು ರಾಜಘಟ್ಟದಲ್ಲಿ ವಾಸಿಸುತ್ತಾರೆ. ಆರೋಪಿಯು ನನ್ನ ಆಪ್ತ ಸ್ನೇಹಿತನಾದ ಕಾರಣ ಅವರು ಬೋರ್ ಹಾಕಿಸುವುದಕ್ಕೆ ಹಣ ಬೇಕಾಗಿದೆ ಎಂದು ಕೇಳಿದ್ದಕ್ಕೆ ಹಣವನ್ನು ನೀಡಿರುತ್ತೇನೆ. ಸದರಿ ಬೋರ್ ನ್ನು ಯಾವ ಊರಿನಲ್ಲಿ ಹಾಕಿಸಿರುತ್ತಾರೆ ಎಂದು ನನ್ನ ದೂರಿನಲ್ಲಿ ನಮೂದು ಮಾಡಿರುವುದಿಲ್ಲ. ಹಣವನ್ನು ನನ್ನ ಮನೆಯಲ್ಲಿ ನೀಡಿರುತ್ತೇನೆ. ಆರೋಪಿಯು 2015 ರಿಂದ ನನಗೆ ಪರಿಚಯವಿರುತ್ತಾರೆ. 2015 ರಿಂದ ನಮ್ಮಿಬ್ಬರ ನಡುವೆ ಹಲವಾರು ಭೇಟಿ ನಡೆದಿರುತ್ತದೆ. ಆ ಸಮಯದಲ್ಲಿ ಹಣದ ವ್ಯವಹಾರ ನಡೆದಿರುವುದಿಲ್ಲ.

2017 ರ ಮಾರ್ಚ್ ತಿಂಗಳ ಕೊನೇಯವಾರದಲ್ಲಿ ನಗದು ಮೂಲಕ ಹಣವನ್ನು ನೀಡಿರುತ್ತೇನೆ. ರೂ. 5,00,000/- ಹಣ ನನ್ನ ಬಳಿ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಚಾಲಕನಾಗಿ ಕೆಲಸ ಮಾಡುತ್ತಿದ್ದು, ಅದರ ಮೂಲಕ ರೂ. 5,00,000/- ಹಣ ಬಂದಿರುತ್ತದೆ. ಪ್ರತೀ ತಿಂಗಳಿಗೆ ರೂ. 35,000/- ದಿಂದ 40,000/- ಹಣ ಬರುತ್ತದೆ. ನನ್ನದೇ ಸ್ವಂತ ವಾಹನವಿರುತ್ತದೆ. ರೂ. 5,00,000/- ಹಣ ಮನೆಯಲ್ಲಿಯೇ ಕೂಡಿಟ್ಟ ಹಣವಾಗಿರುತ್ತದೆ.

ನಾನು ಆದಾಯ ತೆರಿಗೆಯನ್ನು ಪಾವತಿಸಿರುವುದಿಲ್ಲ. ರೂ. 5,00,000/- ಹಣವನ್ನು ರೂ. 500/-ಗಳ ಮುಖಬೆಲೆಯ ನೋಟುಗಳ ಮೂಲಕ ನೀಡಿರುತ್ತೇನೆ. ಸದರಿ ದಿನ ನಾನು ಮತ್ತು ನನ್ನ ಹೆಂಡತಿ ಹಾಗೂ ಆರೋಪಿ ಮಾತ್ರ ಇದ್ದೆವು. ನನಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಹಾಗೂ ಅವರ ಪರಿಚಯವಿಲ್ಲದಿದ್ದರೂ ಸಹ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಚೆಕ್ಕು ಮತ್ತು ಬ್ಯಾಂಕಿನ ಸ್ಟೇಟ್ ಮೆಂಟ್‌ನ್ನು ಹಾಜರುಪಡಿಸಿರುತ್ತೇನೆ. ಚೆಕ್ಕಿನ ಸಂಖ್ಯೆ 588754 ಆಗಿರುತ್ತದೆ. ಚೆಕ್ಕು ಯಾರದು ಎಂದು ಪ್ರಶ್ನಿಸಿದರೆ ಸಾಕ್ಷಿಯು ಚೆಕ್ಕು ಆರೋಪಿಯದ್ದಾಗಿರುವುದಿಲ್ಲ ಮುನಿರಾಜುರವರದ್ದು ಆಗಿರುತ್ತದೆ ಎಂದು ಬ್ಯಾಂಕಿಗೆ ಹೋದಾಗ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಮುನಿರಾಜುರವರು ಯಾರು ಮತ್ತು ಯಾವ ಊರಿನವರು ಎಂದು ತಿಳಿದುಕೊಳ್ಳಲು ಬ್ಯಾಂಕಿನಲ್ಲಿ ಪ್ರಯತ್ನ ಮಾಡಿರುವುದಿಲ್ಲ.

ಚೆಕ್ಕು ಆರೋಪಿಯದ್ದಾಗಿರುವುದಿಲ್ಲ ಮುನಿರಾಜುರವರ ಚೆಕ್ಕು ಆಗಿರುತ್ತದೆ ಎಂದು ಬ್ಯಾಂಕಿನವರು ಎಂಡೋರ್ಸ್ ಮೆಂಟ್‌ನ್ನು ನೀಡಿರುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಬ್ಯಾಂಕಿನವರು ಚೆಕ್ಕು ಆರೋಪಿಯದ್ದಾಗಿರುವುದಿಲ್ಲ ಮುನಿರಾಜುರವರ ಚೆಕ್ಕಾಗಿರುತ್ತದೆ ಎಂದು ತೋರಿಸಲು ಯಾವ ದಾಖಲೆಯನ್ನು ನೀಡಿರುತ್ತಾರೆ ಎಂದು ಪ್ರಶ್ನಿಸಿದರೆ ಸಾಕ್ಷಿಯು ಅವರು ಹಾಜರುಪಡಿಸಿದ ದಾಖಲೆಗಳನ್ನು ನೋಡಿ ನಿಪಿ-3 ಸದರಿ ದಾಖಲೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-3 ನ್ನು ತೋರಿಸಲಾಗಿ, ಸದರಿ ದಾಖಲೆಯಲ್ಲಿ ಚೆಕ್ಕು ಆರೋಪಿಗೆ ಸೇರಿದ್ದಾಗಿರುವುದಿಲ್ಲ ಮುನಿರಾಜುರವರ ಚೆಕ್ಕು ಆಗಿರುತ್ತದೆ ಎಂದು ನಮೂದಾಗಿರುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಮುನಿರಾಜುರವರ ಚೆಕ್ಕು ನೀಡಿರುತ್ತೀರಾ ನಿಮ್ಮ ಚೆಕ್ಕು ನೀಡಿರುವುದಿಲ್ಲ ಎಂದು ದೂರವಾಣಿ ಕರೆ ಮೂಲಕ 2017 ರ 9 ನೇ ತಿಂಗಳಿನಲ್ಲಿ ಪ್ರಶ್ನಿಸಿರುತ್ತೇನೆ. ದೂರವಾಣಿ ಕರೆಯಲ್ಲಿ ಆರೋಪಿಯ ಜೊತೆ ಮಾತುಕತೆ ನಡೆದ ನಂತರ

ನೇರವಾಗಿ ಭೇಟಿಯಾಗಿ ಪ್ರಶ್ನಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಮೋಸ ಮಾಡಿದ ಕಾರಣ ನನ್ನ ವಕೀಲರಿಗೆ ಭೇಟಿಯಾಗಿರುತ್ತೇನೆ. ಆರೋಪಿಯು ಮೋಸ ಮಾಡಿರುವ ವಿಚಾರವನ್ನು ತಿಳಿಸಿರುತ್ತೇನೆ. ಆರೋಪಿಯು ಮೋಸ ಮಾಡಿರುವುದಕ್ಕೆ ಸಂಬಂಧಿಸಿದಂತೆ ವಕೀಲರ ಮೂಲಕ ಆರೋಪಿಗೆ ನೋಟೀಸ್‌ನ್ನು ನೀಡಿರುತ್ತೇನೆ. ಸದರಿ ನೋಟೀಸ್‌ನ ಪ್ರತಿಯನ್ನು ನೀವು ಹಾಜರುಪಡಿಸಿರುವ ದಾಖಲೆಗಳಲ್ಲಿ ಯಾವುದು ಎಂದು ತೋರಿಸಿರಿ ಎಂದರೆ ಸಾಕ್ಷಿಯು ನ್ಯಾಯಾಲಯದಿಂದ ಜಾರಿ ಮಾಡಿರುವ ಸಮನ್ಸ್ ನ್ನು ತೋರಿಸಿರುತ್ತಾರೆ.

**ಮುಂದುವರದೆ ಪಾಟೀ ಸವಾಲುಃ ನ್ಯಾಯಾಲಯದ ಅವಧಿಯು ಮುಗಿದ ಕಾರಣ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**